# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ–ಅಂತಿಮ ಆದೇಶ ಹೊರಡಿಸುವ ಬಗ್ಗೆ–ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/545/ಗ್ರಾಪಂಕಾ/2016 ದಿನಾಂಕ:26.10.2016.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-1/DE/581/2016/ARE-8 Date:28.12.2017.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-1/DE/ 581/2016/ARE-8 Date:30.12.2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/545/ಗ್ರಾಪಂಕಾ/2016 ದಿನಾಂಕ:19.01.2018.
5. ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 09.02.2018

<u>ಪ್ರಸ್ತಾವನೆ :</u>

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಸರ್ಕಾರದ ಆದೇಶದಲ್ಲಿ ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ಭಾಲ್ಕಿ ತಾಲ್ಲೂಕು, ಜೀದರ್ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14–ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ನಿಬಂಧಕರು ವಿಚಾರಣೆಗಳು–8, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

<u>"ದೋಷಾರೋಪಣೆ"</u>

"That, you DGO while discharging duties in Madakatti Grama Panchayath has committed following illegality. ನೀವು ಎಕಲಾಸಪುರವಾಡಿ ಗ್ರಾಮದ ಸರ್ವೇ ನಂ.34 ರಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕಾಮಗಾರಿ ಅಂದಾಜು ಮೊತ್ತ ರೂ.24,964/– ಆಗಿದ್ದು, ಹಾಜರಾತಿ ಪಟ್ಟಿಯಲ್ಲಿ ಒಟ್ಟು 16 ಜನ ಕೂಲಿಕಾರರು 11 ದಿನ ಕೆಲಸ ನಿರ್ವಹಿಸಿರುವುದಾಗಿ ತೋರಿಸಿದ್ದು, ರೂ.17,600/– ಗಳನ್ನು ಕೂಲಿ ಹಣವಾಗಿ ಕೂಲಿಕಾರರಿಗೆ ವೈಯಕ್ತಿಕವಾಗಿ ನೀಡದೆ ಒಂದೇ ಚೆಕ್ ಮುಖಾಂತರ ಪಾವತಿಸಲಾಗಿರುತ್ತದೆ. ಸಾಮಾಗ್ರಿ ಮೊತ್ತಕ್ಕೆ ಸಂಬಂಧಿಸಿದಂತೆ ಯಾವ ಸಾಮಾಗ್ರಿಗೆ ವೆಚ್ಚ ಭರಿಸಲಾಗಿದೆ ಮತ್ತು ಸಾಮಾಗ್ರಿ ಮೊತ್ತ ರೂ.7,225/– ಗಳನ್ನು ಯಾರಿಗೆ ಪಾವತಿಸಲಾಗಿದೆ ಎಂಬ ವಿವರಗಳು ಇರುವುದಿಲ್ಲ. ಈ ಮುಖಾಂತರ ಅವ್ಯವಹಾರ ಎಸಗಿದ್ದು ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಕರ್ತವ್ಯಲೋಪವೆಸಗಿರುತ್ತೀರಿ. ಆದ ಕಾರಣ ಸರ್ಕಾರಿ ಆಪಾದಿತ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 ರ 3(1) ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಮಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಮಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸಿದ ವೇಳೆಯಲ್ಲಿ ಎಕಲಾಸಪುರವಾಡಿ ಗ್ರಾಮದ ಸರ್ವೇ ನಂ.34 ರಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಗೆ ಸಂಬಂಧ ಎಸಗಿದ ಅವ್ಯವಹಾರವು ಸಾಬೀತಾಗಿರುವುದರಿಂದ ಸದರಿಯವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸುವ ಜೊತೆಗೆ ಇವರ ವೇತನ ಮತ್ತು ಇನ್ನಿತರ ಭತ್ಯೆಗಳಿಂದ ರೂ.7,225/- ಗಳನ್ನು ವಸೂಲಿ ಮಾಡುವ ದಂಡನೆವಿಧಿಸುವುದಕ್ಕಾಗಿ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4) ರಲ್ಲಿ ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಸದರಿ ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸದರಿಯವರ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯುವರು ಅವರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ತಳ್ಳಿಹಾಕಿರುತ್ತಾರೆ ಆದ್ದರಿಂದ ಇದನ್ನು ಒಪ್ಪಲು ಬರುವುದಿಲ್ಲವಾದ ಕಾರಣ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

The Deputy Superintendent of Lokayukta, Bidar was directed by the Hon'ble upalokayukta to investigate. He has been examined as PW-2. PW-2 has stated that he issued notice to the complainant as per Ex-P-6 but he has stated that the complainant did not co-operate in any manner PW-2 has collected relevant documents from the Panchayath and has submitted his report along with documents as per Ex.P-7. In his report he has stated that he complainant did not show the spot and has not produced any documents to show the alleged irregularities.

Dw-1/DGO in her cross examination by the Presenting Officer has denied the suggestion that the M.B book was not attested by the Section Officer and that the details of materials are not forthcoming in the M.B. Book. However, she is not able to explain or justify her denial. The work completion report does not bear the date. Further, she has stated in her cross that she has paid the coolie amount by way of cheque but she had given the checklist to the Bank Manager showing the name of coolie amount by way of cheque but she had given the checklist to the Bank Manager showing the name of coolie workers and their Bank account number and the amount to be given to each worker. But, the copy of that list is not produced. She has produced Ex.D-3 which is the copy of the Muster Roll. She has stated that the coolie amount has been deposited through RTGS to the account of workers. But, there is nothing to show whether the amount has been deposited in the individual account of those workers. There are no Bank statements or any documents to justify her defence.

DW-1/DGO in her defence and in her chief examination has stated that a complaint was given to the Ombudsman regarding the very same work and that the Appellate Authority has passed an order as per Ex.D-1. Ex.D-1 is the order passed by the Karnataka Ombudsman Appellate Authority, which is an Appellate Authority set up to to hear complaint against order passed by Ombudsmen under NREGS. The order is dated 22.02.2017, wherein the order of the Ombudsman of Bidar district dated 15.04.2014 has been cancelled. It was passed in an Appeal preferred by this DGO. The Obdusman of Bidar had passed an order on 15.04.2014 holding this DGO

liable for certain irregularities mentioned in the said order, which includes the workof digging farm pond in the land of Devendra. However, it is seen that the points raised in this case as found in Section 12(3) report and in the Articles of Charge, as mentioned earlier are not raised in that complaint. Further, that order or finding is not binding on this Authority. On going though the entire oral and documentary evidence, there are sufficient materials to establish the charge.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

Having regard to the nature of charges proved against DGO Smt. Mayadevi, it is hereby recommended to the Government to impose penalty of withholding four annual increments payable to DGO Smt. Mayadevi, Panchayath Development Officer, Madakatti Gram Panchayath, Bhalki Taluk, Bidar District, with cumulative effect and also recovering a sum of Rs. 7,225/- from the salary and other allowances payable to DGO Smt. Mayadevi.

ಸರ್ಕಾರವು ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ರವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಹಾಗೂ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ ಸದರಿಯವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸುವ ಜೊತೆಗೆ ಸದರಿಯವರ ವೇತನ ಮತ್ತು ಇನ್ನಿತರ ಭತ್ಯೆಗಳಿಂದ ರೂ.7,225/- ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:545:ಗ್ರಾಪಂಕಾ2016 ಬೆಂಗಳೂರು, ದಿನಾಂಕ-06-04-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸಿದ ವೇಳೆಯಲ್ಲಿ ಎಕಲಾಸಪುರವಾಡಿ ಗ್ರಾಮದ ಸರ್ವೆ ನಂ.34 ರಲ್ಲಿ ಕೃಷಿ ಹೊಂಡ ನಿರ್ಮಾಣ ಕಾಮಗಾರಿಗೆ ಸಂಬಂಧ ಎಸಗಿದ ಅವ್ಯವಹಾರವು ಸಾಬೀತಾಗಿರುವುದರಿಂದ ಸದರಿಯವರಿಗೆ ಮುಂದಿನ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಯಿಡಿಯುವ ದಂಡನೆ ವಿಧಿಸುವ ಜೊತೆಗೆ ಇವರ ವೇತನ ಮತ್ತು ಇನ್ನಿತರ ಭತ್ಯೆಗಳಿಂದ ರೂ.7,225/- ಗಳನ್ನು ವಸೂಲಿ ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

7/4

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
6. ಶ್ರೀ ಮಾಯಾದೇವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮದಕಟ್ಟಿ ಗ್ರಾಮ ಪಂಚಾಯಿತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.